ಹೋಗುವುದನ್ನು ಈಗ ನಿರ್ಬಂಧಿಸಲಾಗಿದೆ. ಹೀಗೆ, ಒಂದೊಂದು ಜಿಲ್ಲೆಯಲ್ಲಿನ ಜಿಲ್ಲಾಧಿಕಾರಿಗಳ ವಿಭಿನ್ನ ನಿರ್ಧಾರಗಳು ಪ್ರವಾಸಿಗರನ್ನು ಗೊಂದಲಕ್ಕೆ ನೂಕುತ್ತಿದ್ದರೆ, ಪ್ರವಾಸೋದ್ಯಮವನ್ನೇ ನೆಚ್ಚಿಕೊಂಡವರು, 'ನಾಳೆ ಏನು' ಎಂದು ನಿತ್ಯವೂ ಯೋಚಿಸುವ ಪರಿಸ್ಥಿತಿ ಸೃಷ್ಟಿಯಾಗಿದೆ.

'ಮುಖ್ಯಮಂತ್ರಿ ಒಂದು ಆದೇಶ ನೀಡಿದರೆ, ಕಂದಾಯ ಮಂತ್ರಿ ಮತ್ತೊಂದು ಹೇಳಿಕೆ ಕೊಡುತ್ತಾರೆ. ಬಿಬಿಎಂಪಿ ಮುಖ್ಯ ಆಯುಕ್ತರು ಲಾಕ್‌ಡೌನ್ ಮಾಡುತ್ತೇವೆ ಎಂದರೆ, ಬೇರೆ ಯಾವುದೋ ಜಿಲ್ಲೆಯ ಜಿಲ್ಲಾಧಿಕಾರಿ ಮತ್ತೊಂದು ಆದೇಶ ಕೊಟ್ಟಿರುತ್ತಾರೆ. ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಏಕರೂಪದ ಮಾರ್ಗಸೂಚಿ ಅಥವಾ ನಿಯಮಗಳನ್ನು ರೂಪಿಸಬೇಕು' ಎಂದು ಒತ್ತಾಯಿಸುತ್ತಾರೆ 'ಸ್ಕೈವೇ ಇಂಟರ್‌ನ್ಯಾಷನಲ್ ಟ್ರಾವೆಲ್ಸ್'ನ ನಿರ್ದೇಶಕ ಎಸ್. ಮಹಾಲಿಂಗಯ್ಯ.

ದೇಶದಲ್ಲಿ ವಿಮಾನಗಳ ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಶಾಪಿಂಗ್ ಮಾಲ್‌ಗಳು, ಚಿತ್ರಮಂದಿರಗಳು ಕಾರ್ಯನಿರ್ವಹಿಸುತ್ತಿವೆ. ಆದರೆ, ಪ್ರೇಕ್ಷಣೀಯ ತಾಣಗಳಲ್ಲಿ ಮಾತ್ರ ಹಲವು ನಿರ್ಬಂಧಗಳನ್ನು ವಿಧಿಸಲಾಗುತ್ತಿದೆ. ರಾಜ್ಯದ ಜಿಡಿಪಿಯಲ್ಲಿ ಶೇ 14ರಿಂದ ಶೇ 15ರಷ್ಟು ಕೊಡುಗೆ ಈ ವಲಯದ್ದು. ಆದರೆ, ಈ ವಲಯಕ್ಕೆ ಸಿಗಬೇಕಾದ ಆದ್ಯತೆ, ಪ್ರೋತ್ಸಾಹ ದೊರೆಯುತ್ತಿಲ್ಲ. ಯಾವುದೇ ಕೊಡುಗೆ, ವಿಶೇಷ ಪ್ಯಾಕೇಜ್‌ಗಳು ಬೇಡ, ಉದ್ಯಮವನ್ನು ಸರಾಗವಾಗಿ ನಡೆಸಿಕೊಂಡು ಹೋಗಲು ಬಿಟ್ಟರೂ ಸಾಕು ಎಂಬ ಮನವಿ ಪ್ರವಾಸೋದ್ಯಮಿಗಳದ್ದು.

ಏಕಕಾಲಕ್ಕೆ ಸಾವಿರಕ್ಕೂ ಹೆಚ್ಚು ಜನ ಒಂದೆಡೆ ಸೇರುವಂತಹ ಪ್ರವಾಸಿ ತಾಣ ಅಥವಾ ಪಾರಂಪರಿಕ ಸ್ಥಳ ರಾಜ್ಯದಲ್ಲಿ ಎಲ್ಲಿಯೂ ಇಲ್ಲ. ನಿರ್ದಿಷ್ಟ ಸಮಯ ನಿಗದಿ ಮಾಡಿ, ಪ್ರವಾಸಿಗರ ಓಡಾಟಕ್ಕೆ ಅವಕಾಶ ಕೊಡಬೇಕು ಎಂಬ ಒತ್ತಾಯವೂ ಇದೆ.

'ದುಡ್ಡು ಖರ್ಚು ಮಾಡಿಕೊಂಡು ಬಂದು ಕೊರೊನಾ ಸೋಂಕು ಹಚ್ಚಿಕೊಂಡು ಹೋಗಬೇಕು ಎಂದು ಯಾರೂ ಬಯಸುವುದಿಲ್ಲ. ಪ್ರವಾಸಕ್ಕೆ ಬರುವವರು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು



ಪ್ರವಾಸದ ಖರ್ಚಿನ ಜೊತೆಗೆ, ಪರೀಕ್ಷಾ ವರದಿಗೆ ನೂರಾರು ರೂಪಾಯಿ ಖರ್ಚು ಮಾಡಲು ಜನಸಾಮಾನ್ಯರಿಗೆ ಮನಸಿರುವುದಿಲ್ಲ. ಪ್ರವಾಸಕ್ಕೆ ಬಂದ ಅನೇಕರು, ಪ್ರೇಕ್ಷಣೀಯ ಸ್ಥಳಗಳನ್ನು ನೋಡದೇ ಹಿಂದಿರುಗುತ್ತಿದ್ದಾರೆ.

**-ಹಂಸ ಭಟ್,**
**'ಅಕ್ಷಯ ಹೋಮ್‌ಸ್ಟೇ' ಮಾಲೀಕ,**
**ಕೊಡಚಾದ್ರಿ**

